O.S. ನಂಬರಃ 24/2019

ಪಿ. ಡಬ್ಲ್ಯೂಃ 1

ದಿಃ 27-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯರ ಪರ ಶ್ರೀ ಎ.ಎನ್.ಟಿ. ವಕೀಲರಿಂದಃ</u>

ಗೊವಿಂದ ತುಕ್ಕಪ್ಪಾ ನಾಯ್ಕುರವರಿಗೆ ಲಕ್ಷ್ಮಣ, ರಾಧಾ ಹಾಗೂ ಬೇಬಿ ಎನ್ನುವ ಮಕ್ಕಳು ಎಂದರೆ ಸರಿ. ಬೇಬಿ ಮದುವೆಯಾಗದೇ ಮೃತಪಟ್ಟಿರುತ್ತಾಳೆ. ಬೇಬಿ 2002 ರಲ್ಲಿ ಮೃತಪಟ್ಟಿದ್ದಾಳೆಂದರೆ ದಾಖಲೆ ನೋಡದೇ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಬೇಬಿ ತನ್ನ ಸಹೋದರನ ಜೊತೆಯೇ ವಾಸವಿದ್ದಳು ಎಂದರೆ ಸರಿ. ನನ್ನ ತಾಯಿ 17-18 ವಯಸ್ಸಿನಲ್ಲಿ ಮದುವೆಯಾಗಿರುತ್ತಾಳೆ. ಮದುವೆಯಾದ ನಂತರ ನನ್ನ ತಾಯಿ ಗಂಡನ ಮನೆಯಲ್ಲಿ ವಾಸ್ತವ್ಯವಿದ್ದರು ಎಂದರೆ ಆಗಾಗ ಬಂದು ಹೋಗಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ದಿಃ 29-03-1985 ರಲ್ಲಿ ಗೋವಿಂದ ಮೃತಪಟ್ಟಿದ್ದಾನೆ ಎಂದರೆ ಇಸ್ವಿ ನೆನಪಿಲ್ಲ ಎಂದು ಹೇಳುತ್ತಾರೆ. ಬೇಬಿ ಮಾನಸಿಕವಾಗಿ ಅಸ್ವಸ್ಥನಿದ್ದಳು ಎಂದರೆ ಮಂದಬುದ್ಧಿಯವಳಿದ್ದು, ಮಾತನಾಡುತ್ತಿದ್ದಳು, ಓಡಾಡುತ್ತಿದ್ದಳು ಎಂದು ಹೇಳುತ್ತಾರೆ. ಬೇಬಿ ಸ್ವಂತ ದುಡಿಮೆ ಅಥವಾ ಉತ್ಪನ್ನ ಹೊಂದಿರಲಿಲ್ಲ ಎಂದರೆ ಸರಿ. ಬೇಬಿ ತನ್ನ ಸಹೋದರನ ಆದಾಯದ ಮೇಲೆಯೇ ಅವಲಂಬಿತಳಾಗಿದ್ದಳು ಎಂದರೆ ಸರಿ.

ದಾವಾ ಆಸ್ತಿಗಳ ವಹಿವಾಟೆಯನ್ನು ಗೋವಿಂದನ ನಂತರ 1 ನೇ ಪ್ರತಿವಾದಿ ಮಾಡುತ್ತಿದ್ದಾನೆ ಎಂದರೆ ನಮ್ಮ ತಾಯಿಯೂ ಸಹ ಹೋಗಿ ಬರುತ್ತಿದ್ದಳು ಎಂದು

ಹೇಳುತ್ತಾರೆ. ನನ್ನ ತಾಯಿಯ ತಾಯಿ ಗೋವಿಂದನ ನಂತರ ಮೃತಪಟ್ಟಿದ್ದಾಳೆ. ದಾವಾ ಆಸ್ತಿಗಳು ಗೋವಿಂದನಿಗೆ ಪಿತ್ರಾರ್ಜಿತವಾಗಿ ಬಂದಿಲ್ಲ, ಅವು ಆತನಿಗೆ ಚಿಕ್ಕಪ್ಪನಿಂದ ಬಂದ ಆಸ್ತಿಗಳು ಎಂದರೆ ಎಲ್ಲರೂ ಸೇರಿಯೇ ಉಪಭೋಗ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಗೋವಿಂದನಿಗೆ ಜಮೀನು ಯಾವ ಮೂಲದಿಂದ ಬಂದಿದೆ ಎಂದು ಹೇಳಲು ಬರುವುದಿಲ್ಲ. ಗೋವಿಂದನ ಅಣ್ಣನ ಹೆಸರು ಕಿರಾ. ಗೋವಿಂದನ ಎಲ್ಲ ರೀತಿಯ ಉಪಚಾರವನ್ನು 1 ನೇ ಪ್ರತಿವಾದಿ ಮಾಡುತ್ತಿದ್ದ ಎಂದರೆ ಸಾಕ್ಷಿ ನಮ್ಮ ಮನೆಯವರೂ ಸಹ ಹತ್ತಿರದಲ್ಲಿಯೇ ಇದ್ದು ನಮ್ಮ ತಾಯಿ ಸಹ ಊಟೋಪಚಾರ ನೀಡುತ್ತಿದ್ದರು. ಸದರಿ ಗೋವಿಂದರವರಿಗೆ ಯಾವುದೇ ತೊಂದರೆ ಇರಲಿಲ್ಲ ಎಂದು ಹೇಳುತ್ತಾರೆ.

ಗೋವಿಂದನಿಗೆ ಗಂಡು ಮಕ್ಕಳು ಇಲ್ಲದ ಕಾರಣ ಕುಟುಂಬದ ಕಾರ್ಯಗಳನ್ನು ನಿರ್ವಹಿಸಲು 1 ನೇ ಪ್ರತಿವಾದಿಯನ್ನು ದತ್ತಕಕ್ಕೆ ಪಡೆದಿದ್ದ ಎಂದರೆ ಸಾಕ್ಷಿ ಆತ ಸಾಕುಮಗ ಇರುತ್ತಾನೆಂದು ಹೇಳುತ್ತಾರೆ. ಗೋವಿಂದ ಆರೋಗ್ಯವಾಗಿದ್ದಾಗ ಆಕಸ್ಮಿಕವಾಗಿ ಬಾವಿಯಲ್ಲಿ ಬಿದ್ದು ಮೃತಪಟ್ಟಿರುತ್ತಾರೆ. ಗೋವಿಂದನಿಗೆ ಸಾಕಷ್ಟು ವ್ಯವಹಾರ ಜ್ಞಾನ ಇತ್ತು ಎಂದರೆ ಅದನ್ನೆಲ್ಲಾ ತಿಳಿದುಕೊಳ್ಳುವಷ್ಟು ನಾನು ಆ ಸಮಯದಲ್ಲಿ ದೊಡ್ಡವಳಿರಲಿಲ್ಲ ಎಂದು ಹೇಳುತ್ತಾರೆ. ಕುಟುಂಬದ ಕಾಗದಪತ್ರಗಳ ವ್ಯವಹಾರವನ್ನು ಗೋವಿಂದನೇ ಮಾಡಿಕೊಂಡು ಬರುತ್ತಿದ್ದ ಎಂದರೆ ಮಾಹಿತಿ ಇಲ್ಲ. ಗೋವಿಂದನಿಗೆ ಕನ್ನಡ ಓದಿ ಹೇಳಿದರೆ ತಿಳಿಯುತ್ತಿತ್ತು ಎಂದರೆ ಸರಿ. ಜಮೀನು ಸರ್ವೆ ನಂ. 616/3 ಕ್ಕೆ ಹಾಗೂ ಇತರೆ ಜಮೀನಿಗೆ ಸಂಬಂಧಿಸಿದಂತೆ ಗೋವಿಂದನು ದಿಃ 02-04-1975 ರಂದು ನೋಂದಾಯಿತ ಮೃತ್ಯುಪತ್ರ ಮಾಡಿದ್ದರು ಎಂದರೆ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ, ಆ ಕುರಿತು ನನ್ನ

ತಾಯಿ ಜೀವಂತವಿದ್ದರೆ ಉತ್ತರಿಸುತ್ತಿದ್ದರು ಎಂದು ಹೇಳುತ್ತಾರೆ. ಸದರಿ ಮೃತ್ಯುಪತ್ರದಲ್ಲಿ ತನ್ನ ಆಸ್ತಿ ಬೇಬಿ ಮತ್ತು 1 ನೇ ಪ್ರತಿವಾದಿಗೆ ಮುಟ್ಟಬೇಕೆಂದು ಬರೆದಿಟ್ಟಿದ್ದರು ಎಂದರೆ ಸರಿಯಲ್ಲ, ನನ್ನ ತಾಯಿ ಸಹ ಅವರ ತಂದೆ ಜೊತೆ ಒಳ್ಳೆಯ ಬಾಂಧವ್ಯ ಹೊಂದಿದ್ದು, ಯಾವುದೇ ಜಗಳ ಇರಲಿಲ್ಲ, ಕಾರಣ ಇಬ್ಬರಿಗೆ ಮೃತ್ಯುಪತ್ರ ಮಾಡುವುದು ಅಸಾಧ್ಯ ಎಂದು ಹೇಳುತ್ತಾರೆ. ಸದರಿ ಮೃತ್ಯುಪತ್ರದ ವಿಷಯ ನನ್ನ ತಾಯಿಯ ಗಮನಕ್ಕೆ ಇತ್ತು ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರಕ್ಕೆ  ನನ್ನ ಅಜ್ಜಿಯೂ ಸಹ ಸಮ್ಮತಿ ಸೂಚಿಸಿ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಹಾಗೂ ಮೃತ ಬೇಬಿಗೆ ಮಾತ್ರ ಹಕ್ಕಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಹಕ್ಕಿರುವುದಿಲ್ಲ, ಕಾರಣ ವಾಟ್ನಿ ಪಡೆಯಲು ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ ಮತ್ತು ಜಂಟಿ ವಹಿವಾಟಿಯಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಅರ್ಧ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.